ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ನಾಗಮಂಗಲ

<u>ಸಿಸಿ.ನಂ. 390 / 2019</u>

| | | | |
|---|---|---|---|
| ಸಾಕ್ಷಿದಾರರು | ಃ | ವಿನೋದ | ಸಿ.ಡಬ್ಲ್ಯೂ ಃ 1 |
| ತಂದೆ /ಗಂಡನ ಹೆಸರು | ಃ | ಕೃಷ್ಣಮೂರ್ತಿ | ಪಿ.ಡಬ್ಲ್ಯೂ ಃ 1 |
| ವಯಸ್ಸು | ಃ | **45** ವರ್ಷ | |
| ವೃತ್ತಿ | ಃ | ಖಾಸಗಿ ಕೆಲಸ | |
| ವಾಸ ಸ್ಥಳ | ಃ | ಬಣಜಿಗರ ಬೀದಿ, ನಾಗಮಂಗಲ ಟೌನ್ | |

<u>ಸಾಕ್ಷಿಯನ್ನು ದಿನಾಂಕ **25.07.2023** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಖ್ಯ ವಿಚಾರಣೆ ಮಾನ್ಯ ಎ ಪಿ ಪಿ ರವರಿಂದಃ-.</u>**

ಚಾಸಾ 2 ರಿಂದ 7 ಪರಿಚಯ. ನ್ಯಾಯಾಲಯದ ಮುಂದೆ ಇರುವ ಆರೋಪಿ ನನ್ನ ಮೈದುನ. ನನ್ನ ಮಾವನ ಹೆಸರು ಚೆನ್ನಯ್ಯ ಶೆಟ್ಟಿ. ಅವರಿಗೆ ಕೇಶವರಾಜು, ನನ್ನ ಗಂಡ ಕೃಷ್ಣಮೂರ್ತಿ , ಆರೋಪಿ ಪ್ರಕಾಶ ಮೂರು ಜನ ಮಕ್ಕಳು. ನನ್ನ ಭಾವ ಕೇಶವರಾಜು 2007 ರಲ್ಲಿ ಮರಣ ಹೊಂದಿದ್ದಾರೆ. ನಂತರ ಅವರ ಹೆಂಡತಿ ತವರಿಗೆ ಹೋದರು. ನಾವು, ಆರೋಪಿ ಒಟ್ಟಿಗೆ ಇದ್ದೆವು. ನಂತರ ಆರೋಪಿ ಮದುವೆ ಮಾಡಿಕೊಂಡು ಬೇರೆ ಮನೆಗೆ ಹೋದರು. ನಾನು, ನನ್ನ ಗಂಡ ಮಾತ್ರ ಆ ಮನೆಯಲ್ಲಿ ವಾಸವಾಗಿದ್ದೆವು, ನನ್ನ ಗಂಡ 2014 ನೇ ಇಸವಿಯಲ್ಲಿ ತೀರಿಕೊಂಡರು. ನನಗೆ ಮಕ್ಕಳು ಇರುವುದಿಲ್ಲ. ಆರೋಪಿ ಕಾಂತಪುರ ವಿಜಯಾ ಬ್ಯಾಂಕಿನಲ್ಲಿ 2010 ನೇ ಇಸವಿಯಲ್ಲಿ ಸಾಲ ಪಡೆದು ಮರು ಪಾವತಿ ಮಾಡಲಿಲ್ಲ ಎಂಬ ಕಾರಣಕ್ಕೆ ಬ್ಯಾಂಕಿನವರು ಮನೆ ಹರಾಜು ಮಾಡುವುದಾಗಿ ಹೇಳಿದ್ದರು.

ನಾನು ನನ್ನ ತವರು ಮನೆಗೆ ಹೋಗಿದ್ದೆ . ಆಗ ಬ್ಯಾಂಕಿನವರು, ಮತ್ತು ಆರೋಪಿ ಬಂದು ಮನೆಯಲ್ಲಿದ್ದ ನನ್ನ ಸಾಮಾನು ತೆಗೆದುಕೊಂಡು ಹೋಗಿ ಒಂದು ರೂಮಿನಲ್ಲಿ ಹಾಕಿ ಬೀಗ ಹಾಕಿದ್ದರು.

2. ದಿಃ 12.12.2018 ರಂದು ಬೆಳಿಗ್ಗೆ 11.00 ಗಂಟೆ ಸುಮಾರಿಗೆ ಬ್ಯಾಂಕ್ ಅಧಿಕಾರಿಗಳು ಮತ್ತು ಆರೋಪಿ ಬಂದು ಮನೆ ಖಾಲಿ ಮಾಡುವಂತೆ ಹೇಳಿದರು. ನಾನು ಮನೆ ಖಾಲಿ ಮಾಡುವುದಿಲ್ಲ ಎಂದು ಹೇಳಿದ್ದಕ್ಕೆ ಬ್ಯಾಂಕ್ ಅಧಿಕಾರಿಗಳು ಹೊರಟು ಹೋದರು. ಆಗ ಆರೋಪಿ ಹೇ ಸೂಳೆ ಮುಂಡೆ ಮನೆ ಖಾಲಿ ಮಾಡಲ್ಲ ಎಂದು ಹೇಳುತ್ತೀಯಾ, ಮನೆ ಖಾಲಿ ಮಾಡು, ಇಲ್ಲವಾದರೆ ನಿನಗೊಂದು ಗತಿ ಕಾಣಿಸುತ್ತೇನೆಂದು ಹೇಳಿದರು. ಆಗ ಆರೋಪಿ ನನಗೆ ಹಿಡಿದು ಎಳೆದಾಡಿ, ಮೈ ಮೇಲೆ ಹೊಡೆದು ನೋವುಂಟು ಮಾಡಿ, ನೈಟಿ ಹರಿದರು. ಆಗ ಚಾಸಾ 2 ಮತ್ತು 3 ರವರು ಬಂದು ಜಗಳ ಬಿಡಿಸಿದರು. ಆಗ ನಾನು ಬದುಕಿ ಏನು ಪ್ರಯೋಜನ ಎಂದು ನೀರಿನಲ್ಲಿ ಡಿಡಿಟಿ ಪೌಡರ್ ಹಾಕಿ ಕುಡಿದೆ. ಆಗ ಚಾಸಾ 3 ರಿಂದ 5 ರವರು ಬಂದು ಸರ್ಕಾರಿ ಆಸ್ಪತ್ರೆಯಲ್ಲಿ ಸೇರಿಸಿ ಚಿಕಿತ್ಸೆ ಕೊಡಿಸಿದರು,

3. ನಂತರ ನಾನು ತಡವಾಗಿ ಪೊಲೀಸ್ ಠಾಣೆಗೆ ಹೋಗಿ ಆರೋಪಿಯ ಮೇಲೆ ದೂರು ಕೊಟ್ಟಿದ್ದೇನೆ. ದೂರಿನಲ್ಲಿ ನನ್ನ ಸಹಿ ಇದೆ. ದೂರು ನಿಪಿ 1 , ಸಾಕ್ಷಿ ಸಹಿ ನಿಪಿ 1-ಎ ಎಂದು ಗುರ್ತಿಸಲಾಯಿತು. ದೂರು ಪಡೆದ ನಂತರ ದಿಃ 13.12.2018 ರಂದು ಪೊಲೀಸರು ನನ್ನ ಮನೆಗೆ ಬಂದಿದ್ದರು. ಘಟನೆ ನಡೆದ ಜಾಗ ಕೇಳಿದಾಗ ಅವರಿಗೆ ಜಾಗ ತೋರಿಸಿದ್ದೇನೆ. ಆಗ ಚಾಸಾ 6 ಮತ್ತು 7 ಅಲ್ಲಿ ಇದ್ದರು. ಆಗ ಹರಿದು ಹೋದ ನೈಟಿ ವಶಕ್ಕೆ ಪಡೆದರು. ಸಂಜೆ 4.00 ರಿಂದ 4.30 ರ ವರೆಗೆ ಮಹಜರು ಮಾಡಿದರು. ಮಹಜರಿನಲ್ಲಿ ನನ್ನ ಸಹಿ ಇದೆ. ಮಹಜರು ನಿಪಿ 2 , ಸಾಕ್ಷಿ ಸಹಿಯನ್ನು ನಿಪಿ 2-ಎ ಎಂದು ಗುರ್ತಿಸಲಾಯಿತು.

ನ್ಯಾಯಾಲಯದ ಮುಂದೆ ಇರುವ ನೈಟಿ ನೋಡುತ್ತಿದ್ದು, ಅದು ನನ್ನ ನೈಟಿಯಾಗಿದ್ದು ಪೊಲೀಸರು ಅಮಾನತ್ತು ಪಡಿಸಿಕೊಂಡಿರುತ್ತಾರೆ. ನೈಟಿ ಮು.ಮಾ 1 ಎಂದು ಗುರ್ತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

4. 1999 ರಲ್ಲಿ ನನ್ನ ಮದುವೆಯಾಗಿದೆ. ಆಗ ನನ್ನ ಗಂಡ ಮತ್ತು ಸಹೋದರರು ಒಟ್ಟಿಗೆ ವಾಸವಾಗಿದ್ದರು ಎಂದರೆ ಸರಿ. ನಾನು ಈಗ ಇರುವ ಮನೆಯಲ್ಲಿಯೇ ಒಟ್ಟಿಗೆ ವಾಸವಾಗಿದ್ದರು ಎಂದರೆ ಸರಿ. ನನ್ನ ಭಾವ ಕೇಶವರಾಜು ಕೆ.ಎಸ್.ಆರ್.ಟಿ.ಸಿ. ಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಅವರು ಕೆಲಸಕ್ಕೆ ಸೇರಿದ ನಂತರ ಸಹಾ ನಾವು ಎಲ್ಲರೂ ಒಟ್ಟಿಗೆ ವಾಸವಾಗಿದ್ದೆವು ಎಂದರೆ ಸರಿ. ನನಗೆ ವರಲಕ್ಷ್ಮಿ ಎಂಬ ಒಬ್ಬ ನಾದಿನಿ ಇದ್ದಾರೆ ಎಂದರೆ ಸರಿ. ನನ್ನ ಮದುವೆ ಮೊದಲೇ ನಾದಿನಿ ಮದುವೆ ಆಗಿತ್ತು. ನನ್ನ ಮಾವನ ಹೆಸರಿನಲ್ಲಿದ್ದ ಆಸ್ತಿ ಒಟ್ಟಿಗೆ ಅನುಭವಿಸುತ್ತಾ ಜೀವನ ಮಾಡುತ್ತಿದ್ದೆವು ಎಂದರೆ ಸರಿ. 2003 ರಲ್ಲಿ ನನ್ನ ಗಂಡ ಜೀವಂತವಿದ್ದಾಗ ನನ್ನ ಗಂಡ, ಮೈದುನ ಮತ್ತು ಭಾವ ಒಟ್ಟಿಗೆ ಸಹಿ ಮಾಡಿ ವಿಜಯ ಬ್ಯಾಂಕ್ ನಿಂದ ನಮ್ಮ ಮನೆಯ ಮೇಲೆ ಸಾಲ ಪಡೆದಿದ್ದರು ಎಂದರೆ ಸರಿಯಲ್ಲ, ನನ್ನ ಭಾವ ಮತ್ತು ಗಂಡ ಸಹಿ ಮಾಡಿರಲಿಲ್ಲ. 2010 ರಲ್ಲಿ ಸದರಿ ಸಾಲ ನವೀಕರಣ ಮಾಡಿಕೊಂಡಿದ್ದರು ಎಂದರೆ ಸರಿ, ಆವಾಗಲೇ ನಮಗೆ ಸಾಲದ ವಿಚಾರ ಗೊತ್ತಾಯಿತು. 2010 ರಲ್ಲಿ ನಾವು, ನಮ್ಮ ಮೈದುನ ಮತ್ತು ಅತ್ತೆ ಒಟ್ಟಿಗೆ ವಾಸವಾಗಿದ್ದೆವು ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಭಾವನ ಹೆಂಡತಿ ಜ್ಯೋತಿ ಅನ್ಯೊನ್ಯವಾಗಿದ್ದೇವೆ ಎಂದರೆ ಸರಿ.

5. ಸದರಿ ಜ್ಯೋತಿ ಅಸಲು ದಾವೆ ನಂ.115/2009 ನಾಗಮಂಗಲ ಸಿವಿಲ್ ನ್ಯಾಯಾಲಯದಲ್ಲಿ ಆಸ್ತಿಯಲ್ಲಿ ಭಾಗ ಕೋರಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ

ದಾವೆಯಲ್ಲಿ ನನ್ನ ಗಂಡ ಮತ್ತು ಆರೋಪಿ ಹಾಜರಾಗುತ್ತಿದ್ದರು ಎಂದರೆ ಸರಿಯಲ್ಲ. ಸದರಿ ದಾವೆ ಡಿಕ್ರಿಯಾಗಿರುತ್ತದೆ ಎಂದರೆ ಸರಿಯಲ್ಲ. 2016 ರಲ್ಲಿ ನನ್ನ ಗಂಡ ಮರಣ ಹೊಂದಿದಾಗ ಸದರಿ ದಾವೆ ನಡೆಯುತ್ತಿರಲಿಲ್ಲ. ದಿಃ 25.02.2014 ರಂದು ಸದರಿ ದಾವೆ ಇತ್ಯರ್ಥವಾದ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಜ್ಯೋತಿ ತವರು ಮನೆಗೆ ಹೋಗಿದ್ದು , ನಾನು ಮತ್ತು ನನ್ನ ಗಂಡ ಸದರಿ ಮನೆಯಲ್ಲಿ ವಾಸವಾಗಿದ್ದೆವು ಹಾಗೂ ಆರೋಪಿ ಬೇರೆ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. ಮೂರು ಜನರು ಪಡೆದ ಸಾಲ ಮರು ಪಾವತಿಯಾಗಿಲ್ಲವೆಂದು ವಿಜಯಾ ಬ್ಯಾಂಕ್ ನವರು ಸರ್ಫೇಸಿ ಕಾನೂನು ಅಡಿಯಲ್ಲಿ ನೊಟೀಸು ಜಾರಿ ಮಾಡಿದ್ದರು ಎಂದರೆ ಸರಿ, ಆದರೆ ನನ್ನ ಗಂಡ ಮತ್ತು ಭಾವ ಸಾಲ ಪಡೆದಿರಲಿಲ್ಲ. ಬ್ಯಾಂಕ್ ನವರು ನೊಟೀಸು ಕೊಟ್ಟ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿ. ಆಗ ನಾನು ಬ್ಯಾಂಕಿನಲ್ಲಿ ವಿಚಾರಣೆ ಮಾಡಿದ್ದೇನೆ. ನಾವು ಸಾಲ ಪಡೆದಿಲ್ಲ ಎಂದು ಬ್ಯಾಂಕಿಗೆ ಅರ್ಜಿ ಕೊಟ್ಟಿದ್ದೆ. ಬ್ಯಾಂಕ್ ನವರು ನಾವು ವಾಸವಿದ್ದ ಮನೆ ಹರಾಜು ಮಾಡಿದರು ಎಂದರೆ ಸಾಕ್ಷಿ ನಾನು ಮನೆ ಖಾಲಿ ಮಾಡುವುದಿಲ್ಲ ಎಂದು ದೂರು ನೀಡಿದ್ದೇನೆ.

6. ಬ್ಯಾಂಕಿನವರು ಸರ್ಫೇಸಿ ಕಾನೂನು ಅಡಿಯಲ್ಲಿ ಮಾರಾಟ ಮಾಡಿದಾಗ ಬೆಂಗಳೂರಿನ ಮಾಯಣ್ಣ ಎಂಬುವವರು ಮನೆ ಖರೀದಿಸಿದ್ದರು ಎಂದರೆ ಸರಿ. ನಂತರ ಮಾಯಣ್ಣ ಕಂದಾಯ ಕಟ್ಟಿ ಇ-ಖಾತೆ ಮಾಡಿಸಿದ್ದಾರೆ ಎಂದರೆ ಗೊತ್ತಿಲ್ಲ. ನಂತರ ನನ್ನ ಭಾವನ ಹೆಂಡತಿ ಜ್ಯೋತಿ ಅಪರ ಸಿವಿಲ್ ನ್ಯಾಯಾಲಯ, ನಾಗಮಂಗಲದಲ್ಲಿ ಮಾಯಣ್ಣ, ಆರೋಪಿ ಮತ್ತು ಬ್ಯಾಂಕ್ ಮೇಲೆ ಅಸಲು ದಾವೆ ನಂ.296/2018 ದಿಃ 20.12.2018 ರಂದು ದಾಖಲಿಸಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ದಾವೆ ವಜಾ ಆಗಿದೆ ಎಂದರೆ ಗೊತ್ತಿಲ್ಲ.

ಅಸಲು ದಾವೆ ನಂ. 115/2009 ಇತ್ಯರ್ಥವಾದ ನಂತರ ಯಾರೂ ಸಹಾ ಎಫ್.ಡಿ.ಪಿ. ಪ್ರಕರಣ ದಾಖಲಿಸಿರಲಿಲ್ಲ ಎಂದರೆ ಸರಿ. ನಂತರ ನನ್ನ ನಾದಿನಿ ವರಲಕ್ಷ್ಮಿ ಎಫ್.ಡಿ.ಪಿ.7/2015 ಪ್ರಕರಣ ನಾಗಮಂಗಲ ಸಿವಿಲ್ ನ್ಯಾಯಾಲಯದಲ್ಲಿ ದಾಖಲಿಸಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ಎಫ್.ಡಿ.ಪಿ. ಯಲ್ಲಿ ಏಕಪಕ್ಷಿಯವಾಗಿ ತೀರ್ಮಾನ ಆಗಿದೆ ಎಂದರೆ ನೆನಪಿಲ್ಲ. ಆರೋಪಿಯ ಮೇಲೆ ಇರುವ ಅಸಮಾಧಾನದಿಂದ ನಾನು ಸುಳ್ಳು ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

7. ಸದರಿ ದಿನ ಇಬ್ಬರು ಬ್ಯಾಂಕ್ ಅಧಿಕಾರಿಗಳು ಬಂದಿದ್ದರು, ಯಾರು ಅಂತ ಗೊತ್ತಿಲ್ಲ. ಗ್ರಾಮದವರು ಬ್ಯಾಂಕ್ ಅಧಿಕಾರಿಗಳ ಜೊತೆ ಬಂದಿರಲಿಲ್ಲ, ಸದರಿ ದಿನ 11.00 ಗಂಟೆಗೆ ಬಂದಾಗ ಬ್ಯಾಂಕ್ ಅಧಿಕಾರಿಗಳು ನನಗೆ ನೊಟೀಸು ಜಾರಿ ಮಾಡಿಲ್ಲ. ನಮ್ಮ ಸಾಮಾನು ಒಂದು ಕೋಣೆಯಲ್ಲಿ ಹಾಕಿ ಬೀಗ ಹಾಕಿದಾಗ ಏನು ಮಾಡಬೇಕು ಎಂದು ಗೊತ್ತಾಗಲಿಲ್ಲ, ಆದ್ದರಿಂದ ದೂರು ಕೊಟ್ಟಿಲ್ಲ. ನಾನು ಇಲ್ಲದ ಸಮಯದಲ್ಲಿ ನಮ್ಮ ಮನೆಯ ಸಾಮಾನು ಯಾರು ಮುಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಊರಿಗೆ ಹೋಗುವಾಗ ಬೀಗ ಹಾಕಿ ಹೋಗಿದ್ದೆ. ಊರಿಂದ ಬಂದ ನಂತರ ಮನೆಯ ಸಾಮಾನು ಇಲ್ಲದ್ದನ್ನು ನೋಡಿ ಅಕ್ಕಪಕ್ಕ ವಿಚಾರಣೆ ಮಾಡಿದ್ದೇನೆ. ಸದರಿ ದಿನ ಯಾವುದೇ ಬ್ಯಾಂಕ್ ಅಧಿಕಾರಿ ಬಂದಿರಲಿಲ್ಲ, ದೂರಿಗಾಗಿ ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮುಂದುವರಿದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.</u>

( ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ).

ಸಾ.ಓ.ಹೇ.ಕೆ.ಸ.ಇ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ನಾಗಮಂಗಲ